ಹೆಸರು ಇಲ್ಲ, ತೆರಿಗೆ ಇಲ್ಲ. ಚುನಾವಣೆ ಸಂದರ್ಭದಲ್ಲಿ ಜನರುಗಳಿಗೆ ಕುಡಿಸಿ ಅವರುಗಳು ಮೂರು ದಿವಸ ಮೇಲೆಕ್ಕೆ ಏಳದೆ ಗದ್ದೆಯಲ್ಲೇ ಬಿದ್ದಿದ್ದರು.

ಅಧ್ಯಕ್ಷರು :- ಕುಡಿದವರನ್ನು ಗದ್ದೆಗೆ ಹಾಕಿಬಿಟ್ಟರಾ?

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಅವರನ್ನು ಗದ್ದೆಗೆ ಹಾಕಿಬಿಟ್ಟರು. ಒಂದು ಬೊಗಸೆ ಯೂರಿಯಾವನ್ನು ಒಂದು ಬಕೆಟಿನಲ್ಲಿ ದನಗಳಿಗೆ ಕುಡಿಸಿ ಬಿಟ್ಟರೆ ಒಂದು ಗಂಟೆಯಲ್ಲಿ ಸತ್ತು ಹೋಗುತ್ತವೆ.

ಅಧ್ಯಕ್ಷರು :- ಯಾವ ಯಾವ ಪಾರ್ಟಿಯವರು ಎಷ್ಟೆಷ್ಟು ಕೊಟ್ಟರೆಂದು ಲೆಕ್ಕ ಸಿಕ್ಕಿದೆಯೇ?

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಅದರ ಬಗ್ಗೆ ವಿಶೇಷವಾಗಿ ಒಂದು ದಿವಸ ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಸಂಪನ್ಮೂಲ ಕ್ರೋಢೀಕರಿಸುವಲ್ಲಿ ಸರ್ಕಾರ ಸೋತಿದೆ. ತೆರಿಗೆ ಸೋರಿ ಹೋಗುವುದನ್ನು ತಡೆಗಟ್ಟುವ ಬಗ್ಗೆ ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ನಿಯಂತ್ರಣ ಇಲ್ಲ. ಬಜೆಟ್ ಮಂಡಿಸುವ ಸಮಯದಲ್ಲಿ 10 ಪರ್‌ಸೆಂಟ್ ಇದ್ದದ್ದನ್ನು 12 ಪರ್‌ಸೆಂಟ್ ಮಾಡಿ ತೆರಿಗೆ ಹೆಚ್ಚು ಮಾಡಿ ಜನರಿಗೆ ತೊಂದರೆ ಮಾಡುವ ಬದಲು ತೆರಿಗೆ ಸೋರಿ ಹೋಗದ ಹಾಗೆ ಕ್ರಮ ತೆಗದುಕೊಳ್ಳಬೇಕು. ಜನರಲ್ಲಿ ಇರತಕ್ಕಂಥ ಕಪ್ಪು ಹಣ ಹೊರಗೆ ಬರುವ ಹಾಗೆ ಕೇಂದ್ರ ಸರ್ಕಾರದವರು ಮಾಡಿರುವ ಯೋಜನೆಯಂತೆ ರಾಜ್ಯ ಸರ್ಕಾರವೂ ಏನಾದರೂ ಒಂದು ಯೋಜನೆ ಮಾಡಬೇಕು. ಈ ಬಜೆಟ್ ಒಂದು ರೀತಿ. 'ಹಾವೂ ಸಾಯಬಾರದು -ಕೋಲೂ ಮುರಿಯಬಾರದು' ಎನ್ನುವ ರೀತಿಯಲ್ಲಿ ಇದೆ. ಯಾವುದರ ಮೇಲೆ ತೆರಿಗೆಗಳನ್ನು ಹಾಕಿ ಯಾವುದರ ಮೇಲೆ ತೆರಿಗೆ ಕಡಿಮೆ ಮಾಡಬೇಕೆಂದು ನಾನು ಹೇಳಿದ್ದೇನೋ, ಆ ಪ್ರಕಾರ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5. ವರದಿಗಳನ್ನು ಮಂಡಿಸುವುದು

ಶ್ರೀ ಚಂದ್ರಶೇಖರ ಎಂ. ಮಾಮನಿ :- ಮಾನ್ಯ ಅಧ್ಯಕ್ಷರೆ, ವಿಧಾನ ಸಭೆಯ ಅರ್ಜಿಗಳ ಸಮಿತಿಯ 1ನೇ, 2ನೇ, 3ನೇ, 4ನೇ ಮತ್ತು 5ನೇ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

ಶ್ರೀ ಬಿ. ಬಿ. ಹಿರೇರೆಡ್ಡಿ :- ಮಾನ್ಯ ಅಧ್ಯಕ್ಷರೆ, ಇಂಧನ ಇಲಾಖಾ ವಿಷಯ ಸಮಿತಿಯ 1997-98ನೇ ಸಾಲಿನ ಎರಡನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

6. ವಿತ್ತೀಯ ಕಾರ್ಯಕಲಾಪ

(ಅ) 1998-99 ನೇ ಸಾಲಿನ ಆಯವ್ಯಯದ ಮೇಲೆ ನಡೆದ ಸಾಮಾನ್ಯ ಚರ್ಚೆಗೆ ಉತ್ತರ.

★ **ಶ್ರೀ ಸಿದ್ಧರಾಮಯ್ಯ (ಹಣಕಾಸಿನ ಸಚಿವರು)** :- ಮಾನ್ಯ ಸಭಾದ್ಯಕ್ಷರೆ, 1998-99ರ ಆಯವ್ಯಯದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಸುರೇಶ್‌ಕುಮಾರ್‌ರವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಶ್ರೀರಾಮರೆಡ್ಡಿಯವರು, ಮಾನ್ಯ ಪುಟ್ಟಣ್ಣಯವರು, ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಹಾಗೂ ಇನ್ನೂ ಅನೇಕ ಮಾನ್ಯ